ದಿನಾಂಕ 20.03.2023 ರ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕಃ 12.09.2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಪಿ ಇ ಎಸ್ ವಕೀಲರಿಂದಃ **1** ರಿಂದ **3** ನೇ ಆರೋಪಿತರ ಪರವಾಗಿಃ

15. ರಸ್ತೆ ಅಪಘಾತವಾದ ಪಕ್ಷದಲ್ಲಿ ಒಬ್ಬ ವ್ಯಕ್ತಿಯ ದೇಹದ ಮೇಲೆ ಹಲವಾರು ಗಾಯಗಳಾಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಒಬ್ಬ ವ್ಯಕ್ತಿ ಮೃತಪಟ್ಟ ಕೂಡಲೇ ಆತನ ಜೀರ್ಣಕ್ರಿಯೆ ಸ್ಥಗಿತಗೊಳ್ಳುತ್ತದೆ ಎಂದರೆ ಸರಿ. ಒಬ್ಬ ವ್ಯಕ್ತಿ ಸಾಯುವ ಪೂರ್ವದಲ್ಲಿ ಮದ್ಯಪಾನ ಮಾಡಿದ್ದರೇ ಆತ ಮೃತಪಟ್ಟ ಬಳಿಕ ಅದರ ಕುರುಹುಗಳು ಆತನ ಉದರದಲ್ಲಿ ಕಂಡು ಬರುತ್ತದೆ ಎಂದರೆ ಸರಿ. ನಿಪಿ.21 ಮರಣೋತ್ತರ ಪರೀಕ್ಷೆಯ ಪ್ರಕಾರ ಮೃತನ ಹೊಟ್ಟೆ intact ಆಗಿ ಇರುವುದಾಗಿ ನಮೂದಿಸಲಾಗಿದೆ ಎಂದರೆ ಸಾಕ್ಷಿ ಆತನ ಹೊಟ್ಟೆಯ ಭಾಗದಲ್ಲಿ ಯಾವುದೇ ಗಾಯಗಳು ಕಂಡು ಬಂದಿಲ್ಲ ಹಾಗಾಗಿ intact ಎಂದು ನಮೂದು ಮಾಡಿದ್ದೇನೆ ಎನ್ನುತ್ತಾರೆ.

16. ಮೃತನ ಹೊಟ್ಟೆಯಲ್ಲಿ ನಿಮಗೆ ಯಾವುದೇ ಆಹಾರ ಅಥವಾ ದ್ರವ ಪದಾರ್ಥಗಳು ಕಂಡು ಬಂದಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನಾನು ವರದಿಯಲ್ಲಿ ನಮೂದಿಸಿಲ್ಲ ಹಾಗಾಗಿ ಈಗ ಹೇಳಲು ಬರುವುದಿಲ್ಲ ಎನ್ನುತ್ತಾರೆ. ಮೃತನ ಹೊಟ್ಟೆಯಲ್ಲಿ ಮದ್ಯಪಾನದ ಅಂಶ ಇರುವುದನ್ನು ನಾನು ನಮೂದಿಸಿಲ್ಲ ಎಂದರೆ ಸರಿ. ಒಬ್ಬ ವ್ಯಕ್ತಿ ಸಾಯುವ 4 ಗಂಟೆಗಳ ಹಿಂದೆ ಆಹಾರ ಮತ್ತು ಮದ್ಯಪಾನವನ್ನು ಸೇವಿಸಿದ್ದರೆ ಅದರ ಅಂಶಗಳು ಆತನ ಹೊಟ್ಟೆಯಲ್ಲಿ ಕಂಡು ಬರುತ್ತವೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್